## ಪ್ರಾರ್ಥನೆ

# ಶ್ರೀರಾಮಕೃಷ್ಣ ಪ್ರಣತಿಮಾಲಿಕಾ - ೨

**ವಿಗ್ರಹಾರಾಧನಂ ಯೇ ಯೇ ದೂಷಯಂತಿ ಮಹಾಮದಾಃ ।**
**ತೇಷಾಂ ಸಮನುಶಿಕ್ಷಾರ್ಥಂ ಕಾಲಿಕಾಂ ಭವತಾರಿಣೀಮ್ ।**
**ಪೂಜಯಿತ್ವಾ ಕೃತಾರ್ಥತ್ವಂ ಪ್ರಾಪ್ತವಂತಂ ನತೋಽಸ್ಮ್ಯಹಮ್ ॥ ೭ ॥**

ಮೂರ್ತಿಪೂಜೆಯನ್ನು ದೂಷಿಸುವ ಮದಾಂಧರಿಗೆ ಸರಿಯಾದ ಶಿಕ್ಷಣವನ್ನು ನೀಡಲೆಂದೇ ಭವತಾರಿಣಿ ಕಾಳಿಕಾದೇವಿಯನ್ನು ಪೂಜಿಸಿ ಕೃತಾರ್ಥರಾದ ಶ್ರೀರಾಮಕೃಷ್ಣರನ್ನು ನಾನು ನಮಿಸುತ್ತೇನೆ.

**ಅಪರೋಕ್ಷಾನುಭೂತಿಂ ತಾಂ ಪ್ರಾಪ್ಯಾಪಿ ತು ಗುರೋರ್ವಿನಾ ।**
**ಸಂಪ್ರದಾಯಸ್ಯ ಮಾನಾರ್ಥಂ ಗುರೂನ್ ಸಂಗೃಹ್ಣತೇ ನಮಃ ॥ ೮ ॥**

ಯಾರು ಗುರುವಿನ ಸಹಾಯವಿಲ್ಲದೆ ಅಪರೋಕ್ಷಾನುಭೂತಿ (ಕಾಳೀ ಮಾತೆಯ ದರ್ಶನ) ಯನ್ನು ಹೊಂದಿದ ಬಳಿಕವೂ ಸಂಪ್ರದಾಯವನ್ನು ಗೌರವಿಸಲು ಗುರುವನ್ನು ಸ್ವೀಕರಿಸಿದರೋ, ಅಂಥ ಶೀರಾಮಕೃಷ್ಣರಿಗೆ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

**ಯಂ ಲಬ್ಧುಂ ನಗ್ನಸಂನ್ಯಾಸೀ ಯತತೇ ಸ್ಮ ಚಿರಂ ಭೃಶಮ್ ।**
**ನಿರ್ವಿಕಲ್ಪಂ ಸಮಾಧಿಂ ತಂ ಸದ್ಯಃ ಪ್ರಾಪ್ತವತೇ ನಮಃ ॥ ೯ ॥**

ಯಾವ ಸಮಾಧಿಯನ್ನು ಹೊಂದಲು ನಗ್ನಸಂನ್ಯಾಸಿಯು (ತೋತಾ ಪುರಿ) ಬಹುದೀರ್ಘಕಾಲ ತಪಸ್ಸನ್ನಾಚರಿಸಿದನೋ, ಅಂಥ ನಿರ್ವಿಕಲ್ಪ ಸಮಾಧಿಯನ್ನು ತತ್‌ಕ್ಷಣದಲ್ಲೇ ಪಡೆದ ಶ್ರೀರಾಮಕೃಷ್ಣರಿಗೆ ನನ್ನ ನಮನಗಳು.

**ಸರ್ವಧರ್ಮಸಮಾನತ್ವದರ್ಶನಾಯ ಸ್ವಯಂ ಬಹು ।**
**ಸಾಧನಾನ್ಯಾಚರಂತಂ ತಂ ವಂದೇ ಸರ್ವಜಗದ್ಗುರುಮ್ ॥ ೧೦ ॥**

ಎಲ್ಲ ಧರ್ಮಗಳನ್ನೂ ಸಮಾನವೆಂದು ಕಾಣಲು ಸ್ವತಃ ತಾವೇ ವಿವಿಧ ಸಾಧನೆಗಳನ್ನು ಮಾಡಿದ ಶ್ರೀರಾಮಕೃಷ್ಣರಿಗೆ ನಮನಗಳು.

**ಸರ್ವಸಾಧನಸಂಜನ್ಯಫಲಾನಿ ಸಕಲಾನ್ಯಪಿ ।**
**ಸಂನ್ಯಸ್ಯ ಸಾರದಾಪಾದೇ ಸರ್ವಮಂಗಲದಾಯಿನಿ ॥ ೧೧ ॥**



ಎಲ್ಲ ಬಗೆಯ ಸಾಧನೆಗಳಿಂದ ಲಭಿಸಿದ ಎಲ್ಲ ಫಲಗಳನ್ನೂ ಸರ್ವ ಮಂಗಳೆಯಾದ ಶ್ರೀಶಾರದಾದೇವಿಯವರ ಚರಣಗಳಲ್ಲಿ ಸಮರ್ಪಿಸಿದ ಶ್ರೀರಾಮಕೃಷ್ಣರಿಗೆ ನನ್ನ ಪ್ರಣಾಮಗಳು.

**ಸರ್ವಸ್ತ್ರೀಷು ಯಥಾ ಮಾತೃಭಾವೋಃ ಮೋಕ್ಷಾರ್ಥಿಭಿಸ್ಸದಾ ।**
**ಸಾಧಿತವ್ಯಃ ಪ್ರಪಂಚೇಽಸ್ಮಿನ್ ದರ್ಶಯಿತ್ರೇ ನಮೋ ನಮಃ ॥ ೧೨ ॥**

ಮುಕ್ತಿಯನ್ನು ಬಯಸುವ ಎಲ್ಲರೂ ಸಕಲ ಸ್ತ್ರೀಯರನ್ನೂ ಮಾತೃ ಭಾವದಿಂದ ನೋಡಬೇಕೆಂಬ ಆದರ್ಶವನ್ನು ತೋರಿಸಿಕೊಟ್ಟ ಶ್ರೀ ರಾಮಕೃಷ್ಣರಿಗೆ ನನ್ನ ನಮನಗಳು.


— ಸ್ವಾಮಿ ಹರ್ಷಾನಂದ

## ಸೂಕ್ತಿಪ್ರಭ



**ಮ**ತ್ತೆ ಹೊಸ ಒಂದು ಗುರಿಯನ್ನು ಹೊಂದಲು, ಹೊಸ ಕನಸನ್ನು ಕಾಣಲು ನೀನಿನ್ನೂ ಅಷ್ಟೊಂದು ವೃದ್ಧನಾಗಿಲ್ಲ.

— ಸಿ. ಎಸ್.ಲೂಯಿಸ್



**ಹೂ**ವಿನ ಸುಗಂಧ ಗಾಳಿ ಬೀಸಿದ ಕಡೆಗೆ ಮಾತ್ರ ಹರಡುವುದು. ಆದರೆ ಒಬ್ಬ ವ್ಯಕ್ತಿಯ ಸದ್ಗುಣವು ಎಲ್ಲ ದಿಕ್ಕುಗಳಲ್ಲೂ ಹರಡುವುದು.

— ಚಾಣಕ್ಯ



**ಉ**ಸುರಿನ ಪರಿಮಳವಿರಲು
ಕುಸುಮದ ಹಂಗೇಕಯ್ಯಾ
ಕ್ಷಮೆ ದಮೆ ಶಾಂತಿ ಸೈರಣೆಯಿರಲು
ಸಮಾಧಿಯ ಹಂಗೇಕಯ್ಯಾ
ಲೋಕವೆ ತಾನಾದ ಬಳಿಕ
ಏಕಾಂತದ ಹಂಗೇಕಯ್ಯಾ ಚೆನ್ನಮಲ್ಲಿಕಾರ್ಜುನಾ?

— ಅಕ್ಕಮಹಾದೇವಿ



**ಬೆಂ**ಕಿಯಲ್ಲದೆ ಹಣತೆ ಉರಿಯದು.
ಅದೇ ರೀತಿ ಆಧ್ಯಾತ್ಮಿಕ ಜೀವನವಿಲ್ಲದೆ
ಮಾನವನು ಜೀವಿಸಲಾರ. — ಬುದ್ಧ